ಎಂಬ ಹೆಸರಿನ ರಷ್ಯನ್ ರೆಡ್ ಆರ್ಮಿಯ ಮಹಿಳೆಯೊಬ್ಬಳು ನಾಜಿಗಳ ವಿರುದ್ಧ ಹೋರಾಡುತ್ತ ವೀರಮರಣ ಹೊಂದಿದ್ದಳು. ಅದೇ ದಿನ ನಮ್ಮ ಅಕ್ಕ ಹುಟ್ಟಿದಳಂತೆ. ಹುತಾತ್ಮಳಾದ ಆ ರಷ್ಯನ್ ಮಹಿಳೆಯ ಬಗ್ಗೆ ಪತ್ರಿಕೆಯಲ್ಲಿ ಓದಿದ್ದ ನಮ್ಮ ತಂದೆ ಆ ಘಟನೆಯಿಂದ ಪ್ರಭಾವಿತರಾಗಿ, ಆ ಮಹಿಳೆಗೆ ಗೌರವ ಸಲ್ಲಿಸಲು ನಮ್ಮ ಅಕ್ಕನಿಗೆ ಓಲ್ಗಾ ಎಂದೇ ನಾಮಕರಣ ಮಾಡಿದರು. ನಾನೂ ಮತ್ತು ನಮ್ಮ ಅಕ್ಕ ಪ್ರಾಣಸಖಿಯರಂತೆ ಸದಾ ಅಂಟಿಕೊಂಡೇ ಓಡಾಡುತ್ತಿದ್ದೆವು. ಆದರೆ ದುರದೃಷ್ಟಕ್ಕೆ ನಮ್ಮ ಅಕ್ಕ ತನ್ನ ಇಪ್ಪತ್ತೊಂದನೆಯ ವಯಸ್ಸಿಗೆ ಅನಾರೋಗ್ಯದಿಂದ ತೀರಿಕೊಂಡಳು. ಆಕೆಯ ಸಾವು ಹದಿನಾರು ವರ್ಷದ ಹುಡುಗಿಯಾಗಿದ್ದ ನನ್ನನ್ನು ಬೆಚ್ಚಿಬೀಳಿಸಿತು. ಆಗಷ್ಟೇ ಕವಿತೆ ಬರೆಯುವ ಮೂಲಕ ಬರವಣಿಗೆ ಪ್ರಾರಂಭಿಸಿದ್ದ ನಾನು, ಅಕ್ಕನನ್ನು ನನ್ನ ಅಕ್ಷರಗಳಲ್ಲಿ ಸಜೀವಗೊಳಿಸಬೇಕೆಂದು 'ಓಲ್ಗಾ' ಎಂಬ ಆಕೆಯ ಹೆಸರನ್ನೇ ನನ್ನ ಕಾವ್ಯನಾಮವಾಗಿಟ್ಟುಕೊಂಡೆ.

◆ **ತುಂಬಾ ವಿವಾದಕ್ಕೊಳಗಾದ ನಿಮ್ಮ 'ಸ್ವೇಚ್ಛ'ದಂತಹ ಕಾದಂಬರಿಯನ್ನು ನಿಮ್ಮ ಹಾಗೂ ನಿಮ್ಮ ಸಂಗಾತಿ ಕುಟುಂಬರಾವ್ ಕಾಂಬಿನೇಷನ್ನಿನಲ್ಲಿ ಒಂದು ಸಿನಿಮಾ ಮಾಡಲು ಯತ್ನಿಸಿಲ್ಲವೇ? ಕೃತಿಯೊಂದು ಸಿನಿಮಾ ಮಾಧ್ಯಮದಿಂದ ಹೆಚ್ಚು ಜನರನ್ನು ತಲುಪಬಲ್ಲದು ಎಂಬ ನಂಬಿಕೆಯಿಂದ ಈ ಪ್ರಶ್ನೆ ಕೇಳುತ್ತಿದ್ದೇನೆ.**

ನಾವು ಆ ಕಾದಂಬರಿಯನ್ನು ಸಿನಿಮಾ ಮಾಡಬೇಕೆಂದು ಎಂದೋ ಪ್ರಯತ್ನಿಸಿದೆವು. ನಾನು ಸ್ಕ್ರಿಪ್ಟ್ ಸಹ ಬರೆದಿಟ್ಟಿದ್ದೆ, ಆದರೆ ಸಿನಿಮಾ ತೆಗೆಯಲು ಏನೇನೋ ಸಮಸ್ಯೆಗಳಿರುತ್ತವೆ. ನಮಗೆ ದುಡ್ಡಿನದ್ದೇ ದೊಡ್ಡ ಸಮಸ್ಯೆಯಾಯಿತು. ಆದರೆ ಕೆಲವು ಸಂಸ್ಥೆಗಳ ಧನ ಸಹಾಯದಿಂದ ನನ್ನ ಮತ್ತು ಕುಟುಂಬರಾವ್ ಕೃತಿಗಳನ್ನು ಆಧರಿಸಿ ಇದುವರೆಗೂ ನಾವು ಆರು ಸಿನಿಮಾಗಳನ್ನು ಮಾಡಿದ್ದೇವೆ. ಅವು ಯಶಸ್ವಿಯೂ ಆಗಿವೆ. ಆದರೆ 'ಸ್ವೇಚ್ಛ' ಕಾದಂಬರಿಯನ್ನು ಸಿನಿಮಾ ಮಾಡುವುದು ಕನಸಾಗಿಯೇ ಉಳಿಯಿತು.

◆ **ಸಹಜ ಮಾನವ ಸಂಬಂಧಗಳು ಎಂದಿಗೂ ಪರಸ್ಪರವಾಗಿ ಯಜಮಾನಿಕೆ ಅಥವಾ ಅಧೀನತೆ**



ಓಲ್ಗಾ ಅವರೊಂದಿಗೆ ಸಂದರ್ಶಕಿ ಸುನಂದಾ ಕಡಮೆ